

'ಬಾಲವನ'ದ ವಿಹಂಗಮ ನೋಟ

ಆಶಯದಿಂದ ಅವರು ಪುತ್ತೂರಿನಲ್ಲಿ ನಾಡಹಬ್ಬ ದಸರಾ ಆಚರಣೆಯನ್ನು ಶುರು ಮಾಡಿದರು.

ಪುತ್ತೂರು ನಿವಾಸಿ, ಬೆಟ್ಟಂಪಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ವರದರಾಜ ಚಂದ್ರಗಿರಿಯವರು ಹೇಳುವ ಪ್ರಕಾರ, 'ಬಾಲವನದ ಪುಣ್ಯಭೂಮಿಗೆ ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜರಾದ ಡಿವಿಜಿ, ಮಾಸ್ತಿಯವರಿಂದ ತೊಡಗಿ ಕಾರಂತರ ವಾರಗೆಯ ಅನೇಕ ಮಂದಿ ಸಾಹಿತಿಗಳು ಭೇಟಿ ನೀಡಿದ್ದ ದಾಖಲೆಗಳು ಸಿಗುತ್ತವೆ. ಅವರು ಪುತ್ತೂರಿನಲ್ಲಿ ಪ್ರಾರಂಭಿಸಿದ್ದ ದಸರಾ ನಾಡಹಬ್ಬ ಸಂದರ್ಭದಲ್ಲಿ ಅನೇಕ ಮಂದಿ ಸಾಹಿತಿಗಳು ಬಂದು ಉಪನ್ಯಾಸ ನೀಡಿದ್ದಾರೆ ಮತ್ತು ಕಾರಂತರ ಪತ್ನಿ ಲೀಲಾ ಕಾರಂತರ ಪ್ರೀತಿ–ಆತಿಥ್ಯದ ಬಗ್ಗೆ ಅನೇಕರು ಉಲ್ಲೇಖಿಸಿದ್ದಾರೆ. ಕಾರಂತರ ಮಕ್ಕಳಾದ ಹರ್ಷ, ಮಾಲವಿಕಾ, ಉಲ್ಲಾಸ ಮತ್ತು ಕ್ಷಮಾ ಅವರು ಇದೇ ಮನೆಯಲ್ಲಿ ತಮ್ಮ ಬಾಲ್ಯವನ್ನು ಕಳೆದಿದ್ದಾರೆ'.

ಮಗ ಹರ್ಷನ ಅಕಾಲಿಕ ಅಗಲುವಿಕೆಯಿಂದಾಗಿ ಶಿವರಾಮ ಕಾರಂತರ ಬದುಕಿನ ಗತಿ ಬದಲಾಯಿತು. ಅಕ್ಕರೆಯಿಂದ ಬೆಳೆಸಿದ ಮಗ ಅಗಲಿದ ಬಳಿಕ, ಅವರು ತಾವು ಅಕ್ಕರೆಯಿಂದ ರೂಪಿಸಿದ ಬಾಲವನವನ್ನು ತೊರೆದು, 1973ರಲ್ಲಿ ತಮ್ಮ ಹುಟ್ಟೂರಾದ ಕೋಟಕ್ಕೆ ತೆರಳಿದರು. ಮನಸ್ಸಿನ ನೋವು ಮರೆಯಲು, ಪತ್ನಿಯ ಆರೋಗ್ಯ ಸುಧಾರಣೆಗಾಗಿ ಪುತ್ತೂರಿನಿಂದ ಹೊರಡಲು ನಿರ್ಧರಿಸಿದರು. ಅವರು ಕೈಯಾರೆ ನೆಟ್ಟು ಬೆಳೆಸಿದ ಅದೆಷ್ಟೋ ಗಿಡಗಳು ಅದಾಗಲೇ ಮರಗಳಾಗಿದ್ದವು. ದಟ್ಟಹಸಿರು ಎಂದೂ ತೆಳುವಾಗಬಾರದು ಎಂದು ಬಹಳ ಮುತುವರ್ಜಿಯಿಂದ ಅವರು ಗಿಡಮರಗಳನ್ನು ಪೋಷಿಸಿದ್ದರು. ತಮ್ಮ ಅನುಪಸ್ಥಿತಿಯಲ್ಲಿ ಮನೆ, ನಾಟ್ಯಶಾಲೆ, ಮುದ್ರಣಾಲಯ ಮತ್ತು ಸುತ್ತಮುತ್ತಲಿನ ಹಸಿರುಸಂಪತ್ತನ್ನು ನೋಡಿಕೊಳ್ಳಲು ಮನ್ಮಥ ಕುಮಾರ್ ಎಂಬವರಿಗೆ ತಿಳಿಸಿದ್ದರು. ಮನ್ಮಥ ಕುಮಾರ್ ಹಾವುಗಳ ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದವರು. ಹಾಗಾಗಿ ಅವರು ಅಲ್ಲಿನ ಹಸಿರು ಸಂಪತ್ತಿಗೆ ಧಕ್ಕೆ ಮಾಡಲಾರರು ಎಂಬ ವಿಶ್ವಾಸ ಕಾರಂತರದ್ದಾಗಿತ್ತು.

ಶಿವರಾಮ ಕಾರಂತರು ತಮ್ಮ ಪ್ರಯೋಗಭೂಮಿಯಾದ ಬಾಲವನವನ್ನು ಮಾರಾಟ ಮಾಡಲು ನಿರ್ಧರಿಸಿದ ಸಂದರ್ಭದಲ್ಲಿ, ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು, 'ಬಾಲವನ'ವನ್ನು ಸರ್ಕಾರವೇ ತೆಗೆದುಕೊಳ್ಳುವುದಾಗಿ ಹೇಳಿಕೆ ನೀಡಿದರು. ತಮ್ಮ ಮನೆ, ಮುದ್ರಣಾಲಯ, ನಾಟ್ಯಶಾಲೆಗಳಿರುವ ಈ ಪರಿಸರವನ್ನು 'ಬಾಲವನ'ವನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ಕಾರಂತರು ಸರ್ಕಾರಕ್ಕೆ ಸಲಹೆ ಮಾಡಿದ್ದರು.

ಪ್ರಸ್ತುತ 'ಬಾಲವನ'ವು ಕಂದಾಯ ಇಲಾಖೆ ವ್ಯಾಪ್ತಿಯಲ್ಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ 'ಬಾಲವನ' ಸೇರಿಸಿದರೆ, ಕಾರಂತರ ಆಶಯಗಳಿಗೆ ತಕ್ಕಂತೆ ಈ ಪರಿಸರವನ್ನು ಕಲಾತ್ಮಕವಾಗಿ ರೂಪಿಸಬಹುದು ಎಂಬ ಆಗ್ರಹ ಸಾಂಸ್ಕೃತಿಕ ವಲಯದಿಂದ ಕೇಳಿಬರುತ್ತಿದೆ.

## ಬಾಲವನ – ಈಗ ಹೇಗಿದೆ?

ಕಾರಂತರ ಜೀವನದ ಅಗಾಧ ಸಾಧನೆಗಳಿಗೆ ಪ್ರೇರಣೆಯಾಗಿದ್ದುದು ಪುತ್ತೂರಿನ 'ಬಾಲವನ'ದ ಪರಿಸರ. ಆ ಪರಿಸರವು ಹೆಚ್ಚು ಜನರು ಭೇಟಿ ನೀಡುವಂತಹ ಆಕರ್ಷಣೆಯ ಕೇಂದ್ರವಾಗಿ ರೂಪುಗೊಳ್ಳಬೇಕು ಎಂಬ ಆಶಯದಿಂದ 2005ರಲ್ಲಿ ಈಜುಕೊಳ ನಿರ್ಮಿಸಲಾಯಿತು. ಕಾರಂತರು ನೆಟ್ಟು ಬೆಳೆಸಿದ ಗಿಡಮರಗಳು ದಟ್ಟವಾಗಿರುವ ಪ್ರದೇಶದಲ್ಲಿ ವಾಕಿಂಗ್ ಹೋಗುವುದಕ್ಕೆ ಕಾಲುದಾರಿ ನಿರ್ಮಾಣವಾಯಿತು. ಬಯಲು ರಂಗಮಂದಿರವೂ ಅಚ್ಚುಕಟ್ಟಾಗಿ ರೂಪುಗೊಂಡಿದೆ. ಹಿರಿಯ ಕಲಾವಿದ ಮೋಹನ್ ಸೋನ ಅವರ ನಿರ್ದೇಶನದಲ್ಲಿ, ಕಾರಂತರ ಕಾದಂಬರಿಗಳನ್ನು ಆಧರಿಸಿದ ಕಲಾಕೃತಿಗಳ ರಚನೆಯ ಶಿಬಿರ ನಡೆದಿದೆ. ಕಲಾ ಗ್ಯಾಲರಿ ಕೂಡ ಹೊಸದಾಗಿ ನಿರ್ಮಾಣವಾಗಿದ್ದು ವಿಸ್ತಾರವಾಗಿದೆ.

ಕಾರಂತರು ವಾಸವಾಗಿದ್ದ ಮನೆಯನ್ನು ಪುನರ್ ನಿರ್ಮಿಸಿ ಕಾಪಿಡಲಾಗಿದೆ. ಅವರು ಬರವಣಿಗೆಗೆ ಮತ್ತು ಅತಿಥಿಗಳಿಗಾಗಿ ಕಟ್ಟಿಸಿದ ಮನೆಯೊಂದನ್ನು ನವೀಕರಿಸಲಾಗಿದ್ದು, ಸುಸ್ಥಿತಿಯಲ್ಲಿದೆ ಎಂದು ಪ್ರಸ್ತುತ 'ಬಾಲವನ'ದ ವಿಶೇಷ ಕರ್ತವ್ಯಾಧಿಕಾರಿ ಆಗಿರುವ ಡಾ. ಸುಂದರ ಕೇನಾಜೆ ಹೇಳುತ್ತಾರೆ.

'ಬಾಲವನ'ದಲ್ಲಿನ ಹರ್ಷ ಮುದ್ರಣಾಲಯವು ಸೋರುತ್ತ, ಶಿಥಿಲಾವಸ್ಥೆಯಲ್ಲಿದೆ. ಮುದ್ರಣಯಂತ್ರದ ಕೆಲವು ಭಾಗಗಳಷ್ಟೇ ಉಳಿದುಕೊಂಡಿವೆ. ಕಾರಂತರು ಬಳಸಿದ ಅಚ್ಚಿನ ಮೊಳೆಗಳೊಂದೂ ಉಳಿದಿಲ್ಲ. ನಾಟ್ಯಕಲಿಕೆ, ನಾಟಕಗಳ ರಿಹರ್ಸಲ್, ಉಪನ್ಯಾಸ ಕಾರ್ಯಕ್ರಮಗಳಿಗೆ ಆಸರೆಯಾಗಿದ್ದ ನಾಟ್ಯಶಾಲೆಯನ್ನು ತಕ್ಕಮಟ್ಟಿಗೆ ಕಾಪಿಡಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕಾರಂತರ ಕೃತಿಗಳೊಂದೂ ಬಾಲವನದಲ್ಲಿ ಲಭ್ಯವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in


